**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 252/2022**

| | | |
|---|---|---|
| **ಸಾಕ್ಷಿದಾರನ ಹೆಸರು** | : ಪಿ.ಎ ಸೂರಜ್ | ಪಿ.ಡಬ್ಲ್ಯೂ– 4 |
| **ತಂದೆಯ ಹೆಸರು** | : ಪಿ.ಸಿ ಅರಸು | ಸಿ.ಡಬ್ಲ್ಯೂ–19 |
| **ವಯಸ್ಸು** | : 48 ವರ್ಷ | |
| **ಉದ್ಯೋಗ** | : ಪೊಲೀಸ್ ಉಪಾಧೀಕ್ಷಕರು, ಮಡಿಕೇರಿ ಉಪವಿಭಾಗ, ಮಡಿಕೇರಿ, | |
| **ವಾಸಸ್ಥಳ** | : ಮಡಿಕೇರಿ. | |

**ಸಾಕ್ಷಿಯನ್ನು ಈ ದಿನ ದಿಃ18.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು 30.09.2013 ರಿಂದ 13.05.2015 ರವರೆಗೆ ಮೈಸೂರಿನ ಸಿಸಿಬಿ ಘಟಕದಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ– 27.08.2014 ರಂದು ಮೈಸೂರು ನಗರದ ನಜರಾಬಾದ್ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ– 241/2014 ಕಲಂ 457 ಮತ್ತು 380 ಅಡಿಯಲ್ಲಿ ಸ್ವತ್ತು ಮತ್ತು ಆರೋಪಿಯ ಪತ್ತೆ ಕುರಿತು ಬೆಳಗಿನ ಜಾವ ಮುಂಜಾನೆ ಸುಮಾರು 5 ರಿಂದ 5.30 ಗಂಟೆಗೆ ಚಾ.ಸಾಃ 8 ರಿಂದ 18 ರವರ ಜೊತೆಗೆ ಗಸ್ತು ಮಾಡಿಕೊಂಡು ಜೆ.ಸಿ ನಗರ, ಕೆ.ಸಿ ಲೇಔಟ್, ಆಲನಹಳ್ಳಿಯಿಂದ ಟೆರೆಸಿನ್ ಕಾಲೇಜ್ ಬಳಿ ಇರುವ ಬಸ್ ಸ್ಟಾಪ್ ಬಳಿ ಬಂದಾಗ, 4 ಜನ ಅನುಮಾನಸ್ಪದ ಅಸಾಮಿಗಳು ಇದ್ದು, ಅವರನ್ನು ನಾವು ಸಿಬ್ಬಂದಿಗಳ

ಸಹಾಯದಿಂದ ವಶಪಡಿಸಿಕೊಂಡು ಅವರ ಹೆಸರು ವಿಳಾಸವನ್ನು ಕೇಳಲಾಗಿ, ಒಬ್ಬ ವ್ಯಕ್ತಿ ಕಷ್ಣ, ಕಬ್ಬಾಳು, ಮಯೂರ ಮತ್ತು ಅರ್ಜುನ ಎಂದು ತಿಳಿಸಿದ್ದು, ಅವರ ಪೈಕಿ ನಾವು ಕೃಷ್ಣನನ್ನು ಗುರುತಿಸಿದ್ದು, ಆತ ಮೈಸೂರು ನಗರ ಎಂ.ಒ.ಬಿ ಅಸಾಮಿಯಾಗಿದ್ದು, ಸ್ಥಳಕ್ಕೆ ಇಬ್ಬರು ಪಂಚರಾದ ಚಾ.ಸಾಃ4 ಮತ್ತು 5 ರವರನ್ನು ಸಿಬ್ಬಂದಿಗಳ ಸಹಾಯದಿಂದ ಬರಮಾಡಿಕೊಂಡು ಅವರನ್ನು ಅಸಾಮಿಗಳ ಅಂಗಶೋಧನೆ ಕಾಲದಲ್ಲಿ ಪಂಚರಾಗುವಂತೆ ಕೇಳಿಕೊಂಡಾಗ ಅವರು ಅದಕ್ಕೆ ಒಪ್ಪಿದು, ನಂತರ ಅವರ ಸಮಕ್ಷಮ ಕಬ್ಬಾಳು ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಕಬ್ಬಾಳಿನ ಮುಖಾಂತರ ತೆಗೆದು ನೋಡಲಾಗಿ, ಅದರಲ್ಲಿ 19 ಇಂಚಿನ ಒಂದು ಕಬ್ಬಿಣದ ರಾಡ್ ಕಟರ್ ಮತ್ತು ಕಬ್ಬಿಣದ ಹಾರೆ, ಹಳದಿ ಬಣ್ಣದ ಹಿಡಿ ಇರುವ ಸ್ಕ್ರೂಡ್ರೈವರ್, ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಳ್ಳಲಾಯಿತು.

**3.** ನಂತರ ಕೃಷ್ಣ ಈತನ ಬಲಭಾಗದ ಪ್ಯಾಂಟಿನ ಜೇಬಿನಿಂದ ಸಣ್ಣ ಪ್ಲಾಸ್ಟಿಕ್ ಕವರನ್ನು ಹಾಜರುಪಡಿಸಿದ್ದು, ಅದರಲ್ಲಿ 9 ಚಿನ್ನದ ತಾಳಿಗಳು ಇದ್ದು, ಅವುಗಳನ್ನು ಪರಿಶೀಲಿಸಲಾಗಿ ಅವುಗಳು ತಲಾ ಅರ್ಧ ಗ್ರಾಮ್ ಇದ್ದವು. ಅವುಗಳ ಬಗ್ಗೆ ಕೇಳಿದಾಗ ಆತ 10 ದಿನಗಳ ಹಿಂದೆ ನಜರಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಪೊಲೀಸ್ ಕಚೇರಿ ಎದುರುಗಡೆ ಇರುವ ಕಾಳಿಕಾಂಬ ದೇವಸ್ಥಾನದಲ್ಲಿ ಕಳ್ಳತನ ಮಾಡಿರುವ ಬಗ್ಗೆ ತಿಳಿಸಿರುತ್ತಾನೆ. ಮಯೂರನ ಅಂಗ ಶೋದನೆ ಮಾಡಲಾಗಿ, ಆತನ ಬಳಿ ಒಂದು ಕಪ್ಪು ಬಣ್ಣದ ಕಾರ್ಬನ್ ಮೊಬೈಲ್ ಕಂಪನಿಯ ಮೊಬೈಲ್ ಇತ್ತು. ಸದರಿ ವಸ್ತುಗಳನ್ನು ಬೆಳಿಗ್ಗೆ 6.30 ರಿಂದ 7.30 ರವರೆಗೆ ಮಹಜರ್ ಕ್ರಮ ಜರುಗಿಸಿ, ಆರೋಪಿ ಮತ್ತು ವಸ್ತುಗಳ ಜೊತೆಗೆ ಠಾಣೆಗೆ ಹಾಜರಾಗಿ ಸದರಿ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ–39/2014 ರಲ್ಲಿ ಅಳವಡಿಸಿ ಮಾನ್ಯ

ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇವೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–8 ಎಂದು ಗುರುತಿಸಲಾಯಿತು.

**4.** ನಂತರ ಪಂಚರ ಹಾಗೂ ಸಿಬ್ಬಂದಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.ಆರೋಪಿತ ಕಬ್ಬಾಳನು ತಾನು ಕಳೆದ ಒಂದು ವರ್ಷದಿಂದ ತನ್ನ ಸಹಚರರಾದ ಕೃಷ್ಣ, ಅರ್ಜುನ, ಆದಪ್ಪರವರುಗಳ ಜೊತೆ ಸೇರಿ ಮೈಸೂರಿನ ಬಿ.ಎಂ.ಎಲ್ ಲೇಔಟಿನ ರಾಜರಾಜೇಶ್ವರಿ ದೇವಸ್ಥಾನದ ಬೀಗ ಮುರಿದು ಕಳುವು ಮಾಡಿದ್ದು, ಕಳುವು ಮಾಡಿದ ವಸ್ತುಗಳಲ್ಲಿ ಕೆಲವು ವಸ್ತುಗಳನ್ನು ಅಶೋಕ್ ರಸ್ತೆಯಲ್ಲಿರುವ ಗೌತಮ್ ಎನ್ನುವವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ.

**5.** ನಂತರ **6–7** ತಿಂಗಳ ಬಳಿಕ ಜೆ.ಪಿ ನಗರದ ವಿಠಲ್ ದೇವಸ್ಥಾನದಲ್ಲಿ ಕಳುವು ಮಾಡಿದ್ದು, ಅಲ್ಲಿಯ ಬೆಳ್ಳಿಯ ಪದಾರ್ಥಗಳನ್ನು ಸಹ ಗೌತಮ್ ಎನ್ನುವವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಯರಗನಹಳ್ಳಿಯ ಜನತಾ ಕಾಲೋನಿಯ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಳುವು ಮಾಡಿದ್ದು, ಅದರಲ್ಲಿರುವ ಚಿನ್ನದ ತಾಳಿ ಮತ್ತು ಇತರೆ ಪದಾರ್ಥಗಳನ್ನು ಗೌತಮ್ ಎನ್ನುವವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಶ್ರೀರಾಮ್ ಪುರದಿಂದ ಕುವೆಂಪು ನಗರಕ್ಕೆ ಹೋಗುವ ರಸ್ತೆಯಲ್ಲಿರುವ ಲಕ್ಷೀ ನರಸಿಂಹದೇವಸ್ಥಾನದಲ್ಲಿಯೂ ಸಹ ಬೆಳ್ಳಿಯ ಪದಾರ್ಥಗಳನ್ನು ಕಳುವು ಮಾಡಿ, ಸದರಿ ವಸ್ತುಗಳನ್ನು ಗೌತಮ್ ಮಾರಾಟ ಮಾಡಿದ ಬಗ್ಗೆ ತಿಳಿಸಿರುತ್ತಾನೆ. ಸದರಿ ಕಳುವು ಮಾಡಿದ ವಸ್ತುಗಳನ್ನು ಮಾರಾಟ ಮಾಡಿದ ಅಂಗಡಿ ಮತ್ತು ಗೌತಮ್

ರವರನ್ನು ಮತ್ತು ಸದರಿ ವಸ್ತುಗಳನ್ನು ತೋರಿಸುತ್ತೇನೆ ಎಂದು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿರುತ್ತಾರೆ. ಅದೇ ರೀತಿ ಕೃಷ್ಣ ಮತ್ತು ಅರ್ಜುನರವರು ಸ್ವಇಚ್ಛಾ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಕಬ್ಬಾಳಿನ ಸ್ವಇಚ್ಛಾ ಹೇಳಿಕೆಯ ಭಾಗವನ್ನು ನಿಶಾನೆ ಪಿ–9 ಎಂದು, ಕೃಷ್ಣನ ಸ್ವಇಚ್ಛಾ ಹೇಳಿಕೆಯ ಭಾಗವನ್ನು ನಿಶಾನೆ ಪಿ–10 ಎಂದು ಗುರುತಿಸಲಾಯಿತು. ಅದೇ ರೀತಿ ಅರ್ಜುನನ ಸ್ವಇಚ್ಛಾ ಹೇಳಿಕೆಯ ಭಾಗವನ್ನು ನಿಶಾನೆ ಪಿ–11 ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ 3 ದಿನ ಪೊಲೀಸ್ ಬಂಧನಕ್ಕೆ ಕರೆದುಕೊಂಡಿರುತ್ತೇವೆ.

6. ದಿಃ– 28.08.2014 ರಂದು ನಾನು ತನಿಖೆಯನ್ನು ಮುಂದುವರೆಸಿ, ಚಾ.ಸಾ.6 ಮತ್ತು 7 ರವರನ್ನು ಠಾಣೆಗೆ ಬರಮಾಡಿಕೊಂಡು ಅವರನ್ನು ಪಂಚರಾಗುವಂತೆ ಕೇಳಿದಾಗ ಅವರು ಒಪ್ಪಿಕೊಂಡಿರುತ್ತಾರೆ. ಸದರಿ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕಳುವು ಮಾಡಿದ ವಸ್ತು ಮತ್ತು ಅಂಗಡಿಯನ್ನು ತೋರಿಸುತ್ತೇನೆ ಎಂದುಹೇಳಿದ ಮೇರೆಗೆ, ಸದರಿ ಆರೋಪಿತರು ಮತ್ತು ಪಂಚರ ಜೊತೆಗೆ ನಾವು ಇಲಾಖಾ ವಾಹನದಲ್ಲಿ ಬೆಳಿಗ್ಗೆ 9.30 ಗಂಟೆಗೆ ಸಿಸಿಬಿ ಕಚೇರಿಯಿಂದ ಹೊರಟು ಆರೋಪಿ ಕಬ್ಬಾಳು ತೋರಿಸಿದ ಹೆಚ್.ಡಿ ಕೋಟೆಯ ಸರಗೂರಿಗೆ ಹೋಗಿ ಒಂದು ಚಿನ್ನ–ಬೆಳ್ಳಿ ಪಾಲಿಶ್ ಮಾಡುವ ಅಂಗಡಿಯ ಮುಂದೆ ನಿಲ್ಲಿಸಿ, ಅಲ್ಲಿ ಒಬ್ಬ ವ್ಯಕ್ತಿ ಶೇಖರ್ ಎನ್ನುವವರನ್ನು ಗುರುತಿಸಿ, ತಾನು ಈ ಹಿಂದೆ ನೀಡಿದ ಚಿನ್ನದ ತಾಳಿ, ಬೆಳ್ಳಿಯ ಬಟ್ಟಲು ಮತ್ತು ಬೆಳ್ಳಿಯ ಮುಖವಾಡವನು ಕಾಳಿಕ ದೇವಸ್ಥಾನದಲ್ಲಿ ಕಳುವು ಮಾಡಿದ್ದೆಂದು ಹೇಳಿ ಅವುಗಳನ್ನು ಹಾಜರುಪಡಿಸುವಂತೆ ಕೇಳಿದಾಗ, ಸದರಿ ಶೇಖರ್ ವಸ್ತುಗಳನ್ನು ಹಾಜರುಪಡಿಸಿದ್ದು,

ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಅಲ್ಲಿಂದ ಇಲಾಖಾ ಜೀಪಿನಲ್ಲಿ ಮೈಸೂರಿಗೆ ಹೊರಟು, ಮೈಸೂರಿಗೆ 1.30 ಗಂಟೆಗೆ ತಲುಪಿದ್ದು, ಆರೋಪಿತರು ನಮ್ಮನ್ನು ಅಶೋಕರಸ್ತೆಗೆ ಕರೆದುಕೊಂಡು ಹೋಗಿ, ಅಶೋಕರಸ್ತೆಯಲ್ಲಿರುವ ಬಿ.ಜೆ ಜ್ಯೂವೆಲರ್ಸ್ ಅಂಗಡಿಗೆ ಕರೆದುಕೊಂಡು ಹೋಗಿ ಅಲ್ಲಿ ಆರೋಪಿ ಕಬ್ಬಾಳು ತಾನು ಮುಂದೆ ಹೋಗಿ ಅಲ್ಲಿ ಅಂಗಡಿಯಲ್ಲಿದ್ದ ವ್ಯಕ್ತಿಯನ್ನು ಗೌತಮ್ ಎಂದು ಗುರುತಿಸಿ, ತಾನು ಈ ಹಿಂದೆ ನೀಡಿದ ಬೆಳ್ಳಿ ಮತ್ತು ಚಿನ್ನದ ವಸ್ತುಗಳನ್ನು ತಾನು ಮೈಸೂರು ನಗರದ ರಾಜರಾಜೇಶ್ವರಿ ದೇವಸ್ಥಾನ, ವಿಠಲದಾಮ ದೇವಸ್ಥಾನ, ಚಾಮುಂಡೇಶ್ವರಿ ದೇವಸ್ಥಾನ, ಶ್ರೀರಾಮಪುರದ ಲಕ್ಷ್ಮೀ ನರಸಿಂಹ ದೇವಸ್ಥಾನಗಳಲ್ಲಿ ಕಳುವು ಮಾಡಿದ ಚಿನ್ನ-ಬೆಳ್ಳಿ ವಸ್ತುಗಳನ್ನು ಮಾರಾಟ ಮಾಡಿದ್ದು, ಅವುಗಳನ್ನು ಹಾಜರುಪಡಿಸುವಂತೆ ಕೇಳಿದ್ದು, ಅಲ್ಲಿ ಇದ್ದ ಗೌತಮ್ ಪಿಟಿಲಿಯಾ ಎಂಬ ವ್ಯಕ್ತಿಯು ತಾನು ಈ ಹಿಂದೆ ಅವರಿಂದ ಖರೀದಿ ಮಾಡಿದ ಚಿನ್ನ ಮತ್ತು ಬೆಳ್ಳಿಯ 20 ವಸ್ತುಗಳನ್ನು ಪಂಚರ ಸಮಕ್ಷಮ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಮಹಜರ್ ಜರುಗಿಸಿ ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರಿಗೆ 6 ನೇ ಆರೋಪಿಯ ಸಹಿಯನ್ನು ಪಡೆಯಲಾಯಿತು ಮತ್ತು ಸದರಿ ಮಹಜರಿಗೆ ಪಂಚರು ಮತ್ತು ನಾವುಗಳು ಸಹಿ ಮಾಡಿರುತ್ತೇವೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-5 ಎಂದು ಗುರುತಿಸಲಾಯಿತು.

**7.** ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಪೋಟೋವನ್ನು ತೋರಿಸಿ ಅದರಲ್ಲಿರುವ ವಸ್ತುಗಳನ್ನು ನೋಡಿ ಗುರುತಿಸಲು ಕೇಳಿದಾಗ

ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ (ಸದರಿ ಪೋಟೋವನ್ನು ಈಗಾಗಲೇ ನಿಶಾನೆ ಪಿ–3 ಎಂದು ಸಿಸಿ ಸಂಖ್ಯೆ–150/2015 ರಲ್ಲಿ ಗುರುತಿಸಲಾಗಿರುತ್ತದೆ). ನಂತರ ಸದರಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಠಾಣೆಗೆ ಹಾಜರಾಗಿ ಠಾಣಾ ಮಾಲುಪಟ್ಟಿ ಸಂಖ್ಯೆ– 41/2014 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**8.** ನಂತರ ಪಂಚರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಚಾ.ಸಾ6 ರವರು ನನ್ನ ಸಮಕ್ಷಮ ನಿಶಾನೆ ಪಿ–7 ರಂತೆ ಮತ್ತು ಚಾ.ಸಾಃ7 ರವರು ನನ್ನ ಸಮಕ್ಷಮ ನಿಶಾನೆ ಪಿ–6 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ನಂತರ ಆರೋಪಿತರನ್ನು ದಿಃ– 30.08.2014 ರಂದು ನ್ಯಾಯಾಂಗ ಬಂದನಕ್ಕೆ ನೀಡಿರುತ್ತೇನೆ. ನಂತರ ದಿಃ– 31.08.2014 ರಂದು ಪಿರ್ಯಾದಿ ಮಲ್ಲೇಶಪ್ಪರವರನ್ನು ಠಾಣೆಗೆ ಕರೆಯಿಸಿ ವಶಪಡಿಸಿಕೊಂಡ ವಸ್ತುಗಳನ್ನು ತೋರಿಸಿ ಅವುಗಳಲ್ಲಿ ಪಿ.ಎಪ್ ನಲ್ಲಿರುವ ಕ್ರಮ ಸಂಖ್ಯೆ–1 ರಿಂದ 4 ಮತ್ತು 19 ರಲ್ಲಿರುವ ವಸ್ತುಗಳನ್ನು ತಮ್ಮ ದೇವಸ್ಥಾನದಿಂದ ಕಳುವು ಮಾಡಿದ ವಸ್ತುಗಳು ಎಂದು ಗುರುತಿಸಿರುತ್ತಾರೆ.

**9.** ದಿಃ– 14.10.2014 ರಂದು ನ್ಯಾಯಾಲಯದ ಆದೇಶದ ಮೇರೆಗೆ ಕ್ರಮ ಸಂಖ್ಯೆ– 1 ರಿಂದ 4 ಮತ್ತು 19 ವಸ್ತುಗಳನ್ನು ಪಿರ್ಯಾದುದಾರರಿಗೆ ಬಿಡುಗಡೆ ಮಾಡಿರುತ್ತೇನೆ.

**10.** ನಂತರ ದಿಃ– 18.10.2014 ರಂದು ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಕ್ರಮ ಸಂಖ್ಯೆ–1 ರಿಂದ 4 ಮತ್ತು 19 ಗಳನ್ನು ಸರಸ್ವತಿಪುರಂ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ– 142/2013 ಕ್ಕೆ ಸಂಬಂಧಿಸಿದ್ದರಿಂದ ಸದರಿ ಕಡತಗಳನ್ನು

ಸರಸ್ವತಿಪುರಂ ಪೊಲೀಸ್ ಠಾಣೆಗೆ ಸಿಸಿಬಿ ಕಚೇರಿಯ ಸಿಬ್ಬಂದಿ ಚಾ.ಸಾಃ14 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಹಾಜರಿದ್ದ 6 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 6 ನೇ ಆರೋಪಿ ಪರ ವಕೀಲರಿಂದಃ–</u>**

**11.** ದಿಃ– 27.08.2014 ರಂದು ನಿಮ್ಮ ಕರ್ತವ್ಯದ ಸಮಯ ಏನಾಗಿತ್ತು ಎಂದರೆ ಸಾಕ್ಷಿಯು ಸಿಸಿಬಿಯವರಿಗೆ ಪ್ರತ್ಯೇಕವಾಗಿ ಕರ್ತವ್ಯ ಸಮಯ ಇರುವುದಿಲ್ಲ ಎಂದು ನುಡಿಯುತ್ತಾರೆ.

**12.** ಟೆರಿಷನ್ ಕಾಲೇಜಿನ ಬಳಿ ಚಾ.ಸಾಃ8 ರಿಂದ 16 ಮತ್ತು ತಾವುಗಳು ಹೋಗಿರುತ್ತೀರಿ ಎಂದು ಹೇಳಿದ್ದು ಎಷ್ಟು ವಾಹನದಲ್ಲಿ ಹೋಗಿರುತ್ತೀರಿ? ಎಂದರೆ ಸಾಕ್ಷಿಯು 2 ವಾಹನಗಳಲ್ಲಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ವಾಹನಗಳ ಸಂಖ್ಯೆ ಹೇಳಲು ಆಗುತ್ತದೆಯೇ? ಎಂದರೆ ಸಾಕ್ಷಿಯು ನಾನು ಹೋಗಿದ್ದ ವಾಹನದ ಸಂಖ್ಯೆಃ ಕೆಎ 55 ಜಿಃ–160 ಮತ್ತು ಸಿಸಿಐಬಿ ಇನ್ಸಪೆಕ್ಟರ್ ರವರು ಬಂದ ವಾಹನದ ಸಂಖ್ಯೆ ಕೆಎಃ– 55 ಜಿಃ– 297 ಆಗಿರುತ್ತದೆ ಎಂದು ನುಡಿಯುತ್ತಾರೆ.

**13.** ಸದರಿ ಕಾಲೇಜಿನ ಬಸ್ ಸ್ಟಾಂಡಿನ ಬಳಿ ಬೇರೆ ಯಾರು ಇರಲಿಲ್ಲ. ಸದರಿ ಟೆರಿಷನ್ ಕಾಲೇಜಿನ ಬಳಿ ಜನಸಂದಣಿಯ ಸ್ಥಳವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೆಳಗಿನ ಜಾವವಾದ್ದರಿಂದ ಕಡಿಮೆ ಜನ ಇದ್ದರು ಎಂದು ನುಡಿಯುತ್ತಾರೆ. ಬೆಳಗಿನ ಜಾವ ಸದರಿ ಸ್ಥಳದಲ್ಲಿ ಜನರು ಸಾಮಾನ್ಯವಾಗಿ

ಓಡಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ 4 ಜನ ಆರೋಪಿತರನ್ನು ನಾವು ಅಂಗಶೋಧನೆ ಮಾಡಿರುವುದಿಲ್ಲ, ಅವರಿಂದ ಯಾವುದೇ ಅಮಾನತ್ತುಪಡಿಸಿ-ಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ನೋಟೀಸ್ ನೀಡಲಾಗಿರುತ್ತದೆಯೇ? ಎಂದರೆ ಸಾಕ್ಷಿಯು ಅವರನ್ನು ಆರೋಪಿತರನ್ನು ಹಿಡಿದ ನಂತರ ಸಿಬ್ಬಂದಿಯ ಮುಖಾಂತರ ಕರೆಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

**14.** ನಾವು ಸದರಿ ಸ್ಥಳದಲ್ಲಿ ಬೆಳಿಗ್ಗೆ 6 ಗಂಟೆಯಿಂದ ಪಂಚನಾಮೆ ಮುಗಿಯುವವರೆಗೂ ಇದ್ದೆವು. ಪಂಚನಾಮೆ ಎಷ್ಟು ಗಂಟೆಗೆ ಮುಗಿದಿರುತ್ತದೆ ಎಂದರೆ ಸಾಕ್ಷಿಯು 7.30 ಗಂಟೆಗೆ ಮುಗಿದಿರುತ್ತದೆ ಎಂದದು ನುಡಿಯುತ್ತಾರೆ. ಆ ಸಮಯಕ್ಕೆ ಕೆಲಸಕ್ಕೆ ಹೋಗುವ ಜನರು ಸೇರಿದ್ದರು ಎಂದರೆ ಸಾಕ್ಷಿಯು ಕೆಲವರು ಸೇರಿದ್ದರು ಎಂದು ನುಡಿಯುತ್ತಾರೆ. ಸದರಿ ನೆರೆದ ಜನರನ್ನು ಪಂಚರಾಗಿ ಮಾಡಲು ತೊಂದರೆ ಇತ್ತೆ? ಎಂದರೆ ಸಾಕ್ಷಿಯು ಅವರು ಯಾರು ಕೂಡ ಸಾಕ್ಷಿಯಾಗಲು ಮುಂದೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯಾಗಿ ಜನರು ಮುಂದೆ ಬಂದಿರುವುದಿಲ್ಲ ಎಂಬ ವಿಚಾರವನ್ನು ತನಿಖಾ ವರದಿಯಲ್ಲಿ ನಮೂದು ಮಾಡಿರುವುದಿಲ್ಲ.

**15.** ಸದರಿ ಅಸಾಮಿಗಳ ಅಂಗಶೋಧನೆ ಮಾಡಿ ಅವರಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಅವರೂ ಯಾರು ಕೂಡ ಚಿನ್ನ-ಬೆಳ್ಳಿ ವಸ್ತುಗಳು ಮತ್ತು ಮೊಬೈಲ್ ಗಳನ್ನು ಹಾಜರುಪಡಿಸಿರುವುದಿಲ್ಲ, ಅವುಗಳನ್ನು ಅಮಾನತ್ತುಪಡಿಸಿ-ಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-8ರ ಮಹಜರನ್ನು ಠಾಣೆಯಲ್ಲಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**16.** ಆರೋಪಿತರನ್ನು ನಾವು ದಸ್ತಗಿರಿ ಮಾಡಿರುವುದಿಲ್ಲ, ಅವರ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರಲ್ಲಿ ಕಬ್ಬಾಳು, ಕೃಷ್ಣ ಮತ್ತು ಅರ್ಜುನ ಯಾರೂ ಕೂಡ ನಮ್ಮ ಸಮಕ್ಷಮ ಸ್ವಇಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**17.** ಸದರಿ ಕಬ್ಬಾಳು ಮತ್ತು ಕೃಷ್ಣ ಕದ್ದ ವಸ್ತುಗಳನ್ನು ಶೇಖರ್ ಮತ್ತು ಗೌತಮ್ ಎನ್ನುವವರಿಗೆ ಮಾರಾಟ ಮಾಡಿರುವ ಬಗ್ಗೆ ಯಾವುದೇ ಹೇಳಿಕೆಯನ್ನು ನನ್ನ ಸಮಕ್ಷಮ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**18.** ದಿಃ– **28.06.2014** ರಂದು ಚಾ.ಸಾಃ**6** ಮತ್ತು **7** ರವರನ್ನು ಕರೆಸಿರುತ್ತೇವೆ ಎಂದು ಹೇಳಿದ್ದು, ಅವರಿಗೆ ನೋಟೀಸ್ ನೀಡಲಾಗಿರುತ್ತದೆಯೇ? ಎಂದರೆ ಸಾಕ್ಷಿಯು ನೀಡಲಾಗಿತ್ತು ಎಂದು ನುಡಿಯುತ್ತಾರೆ.

**19.** ಮೈಸೂರಿನಿಂದ ಸರಗೂರು ಎಷ್ಟು ಕಿಲೋ ಮೀಟರ್ ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು ಸುಮಾರು **45** ಕಿ.ಮೀ ದೂರ ಇರುತ್ತದೆ ಎಂದು ನುಡಿಯುತ್ತಾರೆ. ಸಿಸಿಬಿ ಕಚೇರಿಯಿಂದ ಶೇಖರ್ ಎನ್ನುವವರ ಅಂಗಡಿಗೆ ಹೋಗಲು ಎಷ್ಟು ಗಂಟೆ ಪ್ರಯಾಣವಾಗಿರುತ್ತದೆ ಎಂದರೆ ಸಾಕ್ಷಿಯು ಈಗ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಎಷ್ಟು ಜನ ಸಿಬ್ಬಂದಿಗಳು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

**20.** ನಾವು ಸರಗೂರಿನ ಶೇಖರ್ ರವರ ಅಂಗಡಿಗೆ ಹೋಗಿರುವುದಿಲ್ಲ, ಅಲ್ಲಿ ಶೇಖರ್ ರವರು ಯಾವುದೇ ಚಿನ್ನ–ಬೆಳ್ಳಿ ವಸ್ತುಗಳನ್ನು ನಮ್ಮ ಸಮಕ್ಷಮ ಹಾಜರುಪಡಿಸಿರುವುದಿಲ್ಲ

ಎಂದರೆ ಸರಿಯಲ್ಲ. ಶೇಖರ್ ರವರ ಅಂಗಡಿಯಲ್ಲಿ ಎಷ್ಟು ಕಾಲ ಇದ್ದೀರಿ? ಎಂದರೆ ಸಾಕ್ಷಿಯು ಬೆಳಿಗ್ಗೆ 11 ಗಂಟೆಯಿಂದ ಮದ್ಯಾಹ್ನ 12 ಗಂಟೆಯವರೆಗೆ ಇದ್ದೆವು ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಲಾಯಿತು. ಸದರಿ ಸ್ಥಳದಲ್ಲಿ ಮಹಜರ್ ಕಾಲದಲ್ಲಿ ಅಕ್ಕ-ಪಕ್ಕದವರನ್ನು ಸಾಕ್ಷಿದಾರರಾಗಿ ಮಾಡಲು ತೊಂದರೆ ಇತ್ತೆ? ಎಂದರೆ ಸಾಕ್ಷಿಯು ಅವರು ಯಾರು ಕೂಡ ಮುಂದೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಶೇಖರ್ ರವರ ಅಂಗಡಿಯ ಬಾಗಿಲು ಯಾವ ದಿಕ್ಕಿನಲ್ಲಿ ಇರುತ್ತದೆ ಎದರೆ ಸಾಕ್ಷಿಯು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಚೆಕ್ಕುಬಂದಿ ಮತ್ತು ಸುತ್ತಳತೆ ಹೇಳಲು ಬರುತ್ತದೆಯೇ? ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

**21.** ಸರಗೂರಿನಿಂದ ಮೈಸೂರಿಗೆ ಎಷ್ಟು ಗಂಟೆಗೆ ಬಂದಿರುತ್ತೀರಿ? ಎಂದರೆ ಸಾಕ್ಷಿಯು ಮದ್ಯಾಹ್ನ 12 ಗಂಟೆಯ ನಂತರ ಹೊರಟಿರುತ್ತೇವೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಮೈಸೂರಿಗೆ ಬಂದಿರುತ್ತೀರಿ ಎಂದರೆ ಸಾಕ್ಷಿಯು 1.30 ಗಂಟೆಗೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಮೈಸೂರಿನಿಂದ ಸರಗೂರು 60 ಕಿಲೋ ಮೀಟರಿಗೂ ಹೆಚ್ಚು ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು ನನಗೆ ನಿಖರವಾಗಿ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

**22.** ಆರೋಪಿ ಕಬ್ಬಾಳು ಬಿ.ಜೆ ಜ್ಯೂವೆಲರಿ ಅಂಗಡಿಗೆ ಕರೆದುಕೊಂಡು ಹೋಗಿರುವುದಿಲ್ಲ, ಅಲ್ಲಿ ಗೌತಮ್ ರವರನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಬ್ಬಾಳು ಗೌತಮ್ ರವರಿಗೆ ಕದ್ದ ಚಿನ್ನ ಮತ್ತು ಬೆಳ್ಳಿಯ ವಸ್ತುಗಳನ್ನು ಮಾರಾಟ

ಮಾಡಿರುವ ವಿಚಾರ ಸುಳ್ಳು, ಅಲ್ಲಿ ಆರೋಪಿ ಗೌತಮ್ ರವರನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

**23.** ಗೌತಮ್ ರವರ ಅಂಗಡಿಯ ಬಾಗಿಲು ಯಾವ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನುಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತೀರಿ? ಎಂದರೆ ಸಾಕ್ಷಿಯು ಮದ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಅಶೋಕ ರಸ್ತೆ ಜನಸಂದಣಿ ಇರುವ ಸ್ಥಳವಾಗಿರುತ್ತದೆ ಎಂದರೆ ಸರಿ.

**24.** ಗೌತಮ್ ರವರು ಚಿನ್ನ ಮತ್ತು ಬೆಳ್ಳಿಯ ವಸ್ತುಗಳನ್ನು ಹಾಜರುಪಡಿಸಿದರು ಎಂದು ಹೇಳಿದ್ದು, ಆ ಸಮಯದಲ್ಲಿ ಪೋಟೋ ಅಥವಾ ವಿಡಿಯೋ ಮಾಡಿರುತ್ತೀರಿಯೇ? ಎಂದರೆ ಸಾಕ್ಷಿಯು ಇಲ್ಲ ಎಎಂದು ನುಡಿಯುತ್ತಾರೆ. ವಿಡಿಯೋ ಮತ್ತು ಪೋಟೋಗಳನ್ನು ತೊಂದರೆ ಇತ್ತೇ ಎಂದರೆ ಸಾಕ್ಷಿಯು ವಿಡಿಯೋ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಅಳತೆಯನ್ನು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ಸದರಿ ಅಂಗಡಿಯ ಅಕ್ಕ–ಪಕ್ಕ ಇದ್ದ ಜನರನ್ನು ಪಂಚರಾಗಿ ಮಾಡಲು ತೊಂದರೆ ಇತ್ತೇ? ಎಂದರೆ ಸಾಕ್ಷಿಯು ಅವರು ಮುಂದೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ.

**25.** 6 ನೇ ಆರೋಪಿಯಿಂದ 20 ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳಿದ್ದು, ಆ ರೀತಿ ಯಾವುದೇ ವಸ್ತುಗಳನ್ನು ಅವರಿಂದ ವಶಕೊಂಡಿರುವುದಿಲ್ಲ

ಎಂದರೆ ಸರಿಯಲ್ಲ. ಸದರಿ ಅಮಾನತ್ತು ಮಹಜರನ್ನು ಠಾಣೆಯಲ್ಲಿ ಅಂಕಿ–ಅಂಶಗಳಿಗೋಸ್ಕರ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ **6** ನೇ ಆರೋಪಿಯನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

**26. 20** ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು ಎಂದು ಹೇಳಿದ್ದು, ಅವುಗಳಿಗೆ ಸಂಬಂಧಪಟ್ಟ ಪೋಟೋ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವುಗಳನ್ನು ನಜರ್ ಬಾದ ಪೊಲೀಸ್ ಠಾಣೆಯ ಪ್ರಕರಣದಲ್ಲಿ ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. **6** ನೇ ಆರೋಪಿಗೂ ಮತ್ತು ಕದ್ದ ಚಿನ್ನ–ಬೆಳ್ಳಿವಸ್ತುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ, ಠಾಣೆಯ ಅಂಕಿ–ಅಂಶಗಳಿಗಾಗಿ ದಾಖಲೆಗಳನ್ನು ಸೃಷ್ಟಿ ಸಿ **6** ನೇ ಆರೋಪಿಯನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ:– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**